# ಆಹಾ ಸುದ್ದಿ!

★ ಸಸಿತೋಟ



ಇದು ಲಂಡನ್‌ನಲ್ಲಿರುವ ಜಿಮ್. ಬ್ರಿಟನ್ ಪ್ರಧಾನಿ ತೆರೆಸಾ ಮೇ ಹಾಗೂ ಇನ್ನೊಬ್ಬ ಸಚಿವರ ಚಿತ್ರಗಳ ಮೇಲೆ ಬಾಲ್ ಎಸೆದು ಸೇಡು ತೀರಿಸಿಕೊಳ್ಳುವ ಆಟ ಈ ಜಿಮ್‌ನಲ್ಲಿದೆಯಂತೆ. ಯೂರೋಪಿಯನ್ ಯೂನಿಯನ್‌ನಿಂದ ಹೊರಹೋಗುವ ಬ್ರಿಟನ್ ಸರ್ಕಾರದ ನಿರ್ಧಾರ (ಬ್ರೆಕ್ಸಿಟ್)ದಿಂದಾಗಿ ಅಲ್ಲಿ ಅವಶ್ಯಕ ವಸ್ತುಗಳ ಬೆಲೆ, ಮನೆ ಬಾಡಿಗೆ ದುಬಾರಿಯಾಗಿದ್ದು ಜನ ಕೋಪ ತೀರಿಸಿಕೊಳ್ಳಲು ಈ ಜಿಮ್ ಅವಕಾಶ ಮಾಡಿಕೊಟ್ಟಿದೆಯಂತೆ. ರಿಯಲ್ ಲೈಫ್‌ನಲ್ಲಿ ಆಗದ್ದನ್ನು ರೀಲ್ ಲೈಫ್‌ನಲ್ಲಿ ಮಾಡಿದ ಹಾಗೆ.

ಆಸ್ಟ್ರಿಯಾದ ಯುವಕನೊಬ್ಬ ಹಣವಿದ್ದ ಪರ್ಸ್ ಕಳೆದುಕೊಂಡು ಕಂಗಾಲಾದ. ಗುರುತು ಚೀಟಿ ಇದ್ದಿದ್ದರಿಂದ ಪೊಲೀಸರೇ ಕೈಯಲ್ಲಿ ಆ ಪರ್ಸ್ ಹಿಡಿದುಕೊಂಡು ಯುವಕನನ್ನು ಹುಡುಕಿಕೊಂಡು ಬಂದರಂತೆ. ಆದರೆ ಪೊಲೀಸರ ಇನ್ನೊಂದು ಕೈಯಲ್ಲಿ ಕೈಕೋಳವೂ ಇತ್ತು. ಪರ್ಸ್‌ನಲ್ಲಿ ಇದ್ದಿದ್ದೆಲ್ಲ ಖೋಟಾ ನೋಟುಗಳಂತೆ. ಬಿಸಿ ಮುಟ್ಟಿಸಿದಾಗ ಈ ಖೋಟಾ ನೋಟುಗಳಿಂದ ಮಾದಕ ದ್ರವ್ಯ ಖರೀದಿಸಲು ಹೊರಟಿದ್ದಾಗಿ ಬಾಯಿ ಬಿಟ್ಟನಂತೆ. ಸದ್ಯ ಜೈಲಿನಲ್ಲಿ ಅಸಲಿ ನೋಟುಗಳು ಹೇಗಿರುತ್ತವೆ ಎಂಬ ಬಗ್ಗೆ ಸಹಕೈದಿಗಳಿಂದ ಪಾಠ ಹೇಳಿಸಿಕೊಳ್ಳುತ್ತಿರಬಹುದು.



ಇದು ಜಗತ್ತಿನ ಅತ್ಯಂತ ದುಬಾರಿ ಶೂ. ಚಿನ್ನ ಹಾಗೂ ಅಪರೂಪದ ವಜ್ರದ ಹರಳುಗಳಿಂದ ತಯಾರಿಸಲಾದ ಇದರ ಬೆಲೆ 17,000,000 ಡಾಲರ್. ಅಂದರೆ 1.23 ಶತ ಕೋಟಿ ರೂಪಾಯಿ. ದುಬೈನಲ್ಲಿ ಬಿಡುಗಡೆ ಮಾಡಲಾಗಿದ್ದು, ಖರೀದಿಸಿದವರ ಪಾದದ ಅಳತೆಗೆ ಹೊಂದುವಂತೆ ಪರಿವರ್ತಿಸಿ ಕೊಡುತ್ತಾರಂತೆ. ನೀನಾರಿಗಾದೆಯೋ ಎಂದರೆ ಕಾಲಿಗೆ ಚಪ್ಪಲಿಯಾದೆ ಎನ್ನುವ ಸರದಿ ಈಗ ಈ ಅಮೂಲ್ಯ ಲೋಹದ್ದು.

ಕ್ಯಾಲಿಫೋರ್ನಿಯಾದ ಪಾರ್ಟಿಗಳಲ್ಲಿ ಆಡುಗಳಿಗೇನು ಕೆಲಸ ಎಂದು ಅಚ್ಚರಿಯಾಗಬಹುದು. ಆದರೆ ನೈಜೀರಿಯಾದ ಈ ಕುಬ್ಜ ಆಡುಗಳು ಪಾರ್ಟಿಯಲ್ಲಿ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತವಂತೆ. ಪಾರ್ಟಿಯೂ ಒತ್ತಡ ಕಡಿಮೆ ಮಾಡುವುದಿಲ್ಲ ಎಂದು ಯಾರಿಗೆ ಅನುಭವಕ್ಕೆ ಬಂತೋ ಗೊತ್ತಿಲ್ಲ. ಆದರೆ ಈ ಐಡಿಯಾ ಜಾರಿಗೊಳಿಸಿದ ಮಾಜಿ ನಟಿ ಸ್ಕೌಟ್ ಎಂಬಾಕೆ ಆಡಿನ ಬಾಡಿಗೆ ಹಣದಿಂದ ಬೊಕ್ಕಸ ತುಂಬಿಸಿಕೊಳ್ಳುತ್ತಿದ್ದಾಳಂತೆ.



ಲಂಡನ್ನಿನ ಕಚೇರಿಗಳಲ್ಲಿ ಕೆಲಸ ಮಾಡಿ ಸುಸ್ತಾದವರು ಊಟ, ಕಾಫಿ ಬಿಡುವಿನಲ್ಲಿ ಮಲಗಿ ನಿದ್ರೆ ಮಾಡಬಹುದಂತೆ. ಆದರೆ ಕಚೇರಿಯಲ್ಲಿ ಅಲ್ಲ, ಅಕ್ಕಪಕ್ಕ ಇರುವ ಪುಟ್ಟ ಕೊಠಡಿಗಳಲ್ಲಿ. ಗಂಟೆಗೆ 20 ಡಾಲರ್ ನೀಡಿದರೆ ಸಾಕು, ಗಡದ್ದಾಗಿ ನಿದ್ರೆ ಹೊಡೆಯಬಹುದು, ಕಾಡುವ ಬಾಸ್ ಕನಸಿನಲ್ಲಿ ಬರದಿದ್ದರೆ..!

ಚೀನಾದ ಈ ವ್ಯಕ್ತಿ ಆಂಗಸ್ ಶೆನ್ ಎಂಬಾತ ಎದೆ ತುಂಬ ಸೂಜಿ ತೂರಿಸಿಕೊಂಡು ಅದೊಂದು ಕಲೆಯೆಂಬಂತೆ ಬೀಗುತ್ತಿದ್ದಾನೆ. ಶಾಂಘೈನಲ್ಲಿ ನಡೆಯುತ್ತಿರುವ ಅತಿ ಘೋರ ದೇಹ ದಂಡನೆ ಪ್ರದರ್ಶನದಲ್ಲಿ ಕಂಡು ಬಂದ ದೃಶ್ಯವಿದು. ಜನರ ವಿಕಾರಗಳಿಗೂ ಒಂದು ವೇದಿಕೆ ಕಲ್ಪಿಸಿಕೊಟ್ಟಿದ್ದಾರಲ್ಲ...

